# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2009-10ನೇ ಸಾಲಿನಲ್ಲಿ ಮತ್ಸ್ಯಾಶ್ರಯ 4ನೇ ಹಂತದ ಯೋಜನೆಯಡಿ ಮಂಜೂರಾದ 5000 ಮನೆಗಳ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡುವಿಕೆ.

ಓದಲಾಗಿದೆ:- (1) ಆದೇಶ ಸಂಖ್ಯೆ:ಪಸಂಮೀ/85/ಮೀಇಯೋ/2009 ದಿನಾಂಕ:06-08-2009.

(2) ಆದೇಶ ಸಂಖ್ಯೆ:ಪಸಂಮೀ/150/ಮೀಇಯೋ/2009 ದಿನಾಂಕ:03-09-2009.

(3) ಆದೇಶ ಸಂಖ್ಯೆ:ಪಸಂಮೀ/27/ಮೀಇಯೋ/2010 ದಿನಾಂಕ:02-03-2010.

(4) ಪತ್ರ ಸಂಖ್ಯೆ:ರಾಮೀಕ/2/58/2009-10 ದಿನಾಂಕ:19-11-2010.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, 2009-10ನೇ ಸಾಲಿನಲ್ಲಿ ಮತ್ಸ್ಯಾಶ್ರಯ 4ನೇ ಹಂತದ ಯೋಜನೆಯಡಿ 5000 ಮನೆಗಳನ್ನು ತಲಾ ರೂ.40,000-00ದಂತೆ ರೂ.20.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ರೂ.6.00 ಕೋಟಿ ಅನುದಾನ ಬಿಡುಗಡೆಗೊಳಿಸಿದೆ.

ಮೇಲೆ ಕ್ರಮ ಸಂಖ್ಯೆ (2) ಮತ್ತು (3)ರಲ್ಲಿ ಓದಲಾದ ಆದೇಶಗಳಲ್ಲಿ, 5000 ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಪತ್ರದಲ್ಲಿ, ಮೀನುಗಾರಿಕೆ ನಿರ್ದೇಶಕರು ಮತ್ಸ್ಯಾಶ್ರಯ ಯೋಜನೆಯು ಅನುಷ್ಠಾನವಾಗುತ್ತಿದ್ದು, ಇದುವರೆಗೆ 211 ಮನೆಗಳು ಪೂರ್ಣಗೊಂಡಿರುತ್ತವೆ. ಉಳಿದ 4789 ಮನೆಗಳು ನಿರ್ಮಾಣದ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ರೂ.2.42 ಕೋಟಿ ವೆಚ್ಚ ಮಾಡಲಾಗಿರುತ್ತದೆ. ಪ್ರಗತಿಯಲ್ಲಿರುವ ಮನೆಗಳನ್ನು ಪೂರ್ಣಗೊಳಿಸಲು 2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2405-00-800-0-20-ಮತ್ಸ್ಯಾಶ್ರಯ (ಯೋಜನೆ)ಯಡಿ ಲಭ್ಯವಿರುವ ರೂ.500.00 ಲಕ್ಷ ಅನುದಾನದಲ್ಲಿ ಉಪ ಶೀರ್ಷಿಕೆ 059-ಇತರ ಖರ್ಚು ಅಡಿ ರೂ.259.00 ಲಕ್ಷ, 422-ವಿಶೇಷ ಘಟಕ ಯೋಜನೆ ಅಡಿ ರೂ.175.00 ಲಕ್ಷ ಹಾಗೂ 423-ಗಿರಿಜನ ಉಪಯೋಜನೆ ಅಡಿ ರೂ.66.00 ಲಕ್ಷ ಹೀಗೆ ಒಟ್ಟು ರೂ.500.00 ಲಕ್ಷ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ ಸಂಖ್ಯೆ:ಪಸಂಮೀ 244 ಮೀಇಯೋ 2010, ಬೆಂಗಳೂರು ದಿನಾಂಕ:18-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, 2009-10ನೇ ಸಾಲಿನಲ್ಲಿನ ಮತ್ಸ್ಯಾಶ್ರಯ 4ನೇ ಹಂತದ ಯೋಜನೆಯಡಿ 5000 ಮನೆಗಳನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ-00-800-ಇತರ ವೆಚ್ಚ-0-20 ಮತ್ಸ್ಯಾಶ್ರಯ (ಯೋಜನೆ)" ಅಡಿ

-2-

ಒದಗಿಸಿರುವ ರೂ.500.00 ಲಕ್ಷಗಳ ಅನುದಾನದಿಂದ ಉಪ ಶೀರ್ಷಿಕೆ 059-ಇತರ ಖರ್ಚು ಅಡಿ ರೂ.103.60 ಲಕ್ಷ, 422-ವಿಶೇಷ ಘಟಕ ಯೋಜನೆ ಅಡಿ ರೂ.70.00 ಲಕ್ಷ ಹಾಗೂ 423-ಗಿರಿಜನ ಉಪಯೋಜನೆ ಅಡಿ ರೂ.26.40 ಲಕ್ಷ, ಹೀಗೆ ಒಟ್ಟು ರೂ.200.00 ಲಕ್ಷ (ಇನ್ನೂರು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಲಾಗಿದೆ.

ಸದರಿ ಮೊತ್ತವನ್ನು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇವರು ಸಲ್ಲಿಸುವ ಪೇಯೀಸ್ ರಸೀದಿಗೆ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರುರವರು ಮೇಲು ರುಜುಗೊಳಿಸಿ ರಾಜ್ಯ ಹುಜೂರ್ ಖಜಾನೆಯಿಂದ ಸೆಳೆದು ಪಾವತಿಸಲು ಅನುಮತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಐಎಫ್‌ಡಿ/455/ವೆಚ್ಚ-4/2010 ದಿನಾಂಕ:11-01-2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಡಿ.ಎಂ. ರಾಜಪ್ಪ 18/1/11
(ಡಿ.ಎಂ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಹೊಯ್ಗೆ ಬಜಾರ್, ಮಂಗಳೂರು.
4) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರಿಗೆ (ಮೀನುಗಾರಿಕೆ ನಿರ್ದೇಶಕರ ಮುಖಾಂತರ)
7) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-4.
9) ಮಾನ್ಯ ಬಂದರು, ಒಳನಾಡು ಜಲಸಾರಿಗೆ, ಪರಿಸರ, ಜೀವಿಶಾಸ್ತ್ರ, ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರ ಆಪ್ತಕಾರ್ಯದರ್ಶಿಗಳು.
10) ಶಾಖಾ ರಕ್ಷಾ ಕಡತ:ಹೆಚ್ಚಿನ ಪ್ರತಿಗಳು.